ಒ.ಎಸ್ ನಂ .25874/2010
ಡಿ.ಡಬ್ಲ್ಯೂ 1

ದಿನಾಂಕ 19.02.2022 ರಂದು ಸಾಕ್ಷಿ ಹಾಜರಿದ್ದು ಪ್ರಮಾಣಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ. ವಿ.ಎ.ಎಂ ವಕೀಲರಿಂದ :-

ನಾನು ಸಲ್ಲಿಸಿದ ರಿಟ್ ಅಪೀಲು ನಂ. 3961/2012, ದಿ.04-09-2012 ರಂದು ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ರಿಟ್ ಅಪೀಲಿನ ಪ್ರತಿಯನ್ನು ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಪಿ.67 ಎಂದು ಗುರುತಿಸಲಾಯಿತು.

ದಾವಾ ಆಸ್ತಿಯ ಶೆಡ್ಯೂಲ್ ಸಿ ಆಸ್ತಿಯ ಖರೀದಿ ಮಾಡಿದ ಮೊಬಲಗನ್ನು ನಾನು ಕೊಟ್ಟಿರುತ್ತೇನೆ. ಅದು ನನ್ನ ಪಾರ್ಮ್ ಮತ್ತು ನರ್ಸರಿ ಇಂದ ಬಂದ ಆದಾಯದಿಂದ ಖರೀದಿಸಿರುತ್ತೇನೆ. ಸದರಿ ಹಣವನ್ನು ನಾನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಸದರಿ

ಹಣ ನಮ್ಮ ಒಟ್ಟು ಕುಟುಂಬದ ಆದಾಯದ ಹಣ ಆಗಿರುತ್ತದೆ ಎಂದರೆ ಸುಳ್ಳು. ಸದರಿ ಪತ್ರದಲ್ಲಿ ನಾನು ಪಾರ್ಮ್ ಮತ್ತು ನರ್ಸರಿಯ ಪ್ರೊಪ್ರೇಟರ್ ಎಂದು ತೋರಿಸಿರುವುದಿಲ್ಲ ಎಂದರೆ ನಿಜ. ಸದರಿ ಖರೀದಿ ಪತ್ರದಲ್ಲಿ ನನ್ನ ವಿಳಾಸ ಬೆಂಗಳೂರಿನದ್ದು ಇರುತ್ತದೆ ಚೆನ್ನೈ ದು ಇರುವುದಿಲ್ಲ ಎಂದರೆ ನಿಜ.

ನಿಡಿ.19 ರ ಮೆಮರಂಡಂ ಆಫ್ ಅಗ್ರಿಮೆಂಟ್ ನಲ್ಲಿ ಹೇಳಿದಂತೆ ಬಾಯಿಮಾತಿನ ಪಾಲು ವಿಭಾಗ ಆದ ಬಗ್ಗೆ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದೇ ದಾಖಲೆ ನಿಡಿ.19 ಇರುತ್ತದೆ ಎಂದು ಹೇಳುತ್ತಾರೆ. ಬಾಯಿಮಾತಿನ ಪಾಲು ವಿಭಾಗ ಹೇಳಲು ನನ್ನನ್ನು ಹೊರತುಪಡಿಸಿ ನನ್ನ ಸಹೋದರಿ, ಸಹೋದರ ಇರುತ್ತಾರೆ. ನಿಡಿ.19 ರಲ್ಲಿ ಸಾಕ್ಷಿದಾರರಾಗಿ ಪಾರ್ಥ ಸಾರಥಿ, ನಾನು ಮತ್ತು ನನ್ನ ತಮ್ಮ ಮುರಳೀಧರ ಮಾತ್ರ ಪಾರ್ಟಿದಾರರಾಗಿರುತ್ತೇವೆ ಎಂದರೆ ನಿಜ. ನಿಡಿ.19 ರಲ್ಲಿ ಆಸ್ತಿಗಳಾದ ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳು ಯಾವ ರೀತಿ ಬಂದಿದ್ದವು ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದು ನಮ್ಮ ಅಜ್ಜನಿಂದ ಬಂದ ಆಸ್ತಿಯಾಗಿ ನಮೂದಿಸಿರುತ್ತದೆ ಎಂದು ಹೇಳುತ್ತಾರೆ. ಶೆಡ್ಯೂಲ್ ಎ ಮತ್ತು ಬಿ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸುಳ್ಳು. ಸದರಿ ಆಸ್ತಿಗಳು ಹಿರಿಯರ ಆಸ್ತಿಗಳು ಎಂದರೆ ನಿಜ. ಕರೂರ್ ವೈಶ್ಯ ಬ್ಯಾಂಕಿಗೆ ಪ್ಲೆಡ್ಜ್ ಮಾಡಿದಾಗ ಯಾವ ದಾಖಲೆಗಳನ್ನು ಕೊಟ್ಟಿದ್ದೇನೆ ಎಂದು ನನಗೆ ಗೊತ್ತಿಲ್ಲ.

ನಾನು 4 ನೇ ಪ್ರತಿವಾದಿಯ ಮೇಲೆ ಮಾಡಿದ ಕೇಸಿನಲ್ಲಿ ರೂ. 67.00 ಲಕ್ಷಕ್ಕೆ ಡಿಕ್ರಿ ಆಗಿದ್ದು ಸದರಿ ಹಣವನ್ನು 4 ನೇ ಪ್ರತಿವಾದಿಯಿಂದ ನಾನು ಡ್ರಾಫ್ಟ್ ಮೂಲಕ ಪಡೆದುಕೊಂಡಿರಬಹುದು. 4 ನೇ ಪ್ರತಿವಾದಿ ನನ್ನ ಸಹೋದರ ನನ್ನ ಮೂರು ಸಹೋದರಿಯರಿಗೆ ತನ್ನ ಹಕ್ಕನ್ನು ಬಿಟ್ಟು ಕೊಟ್ಟ ಬಗ್ಗೆ ರಿಲಿಂಕ್ವಿಶ್ ಮೆಂಟ್ ಡೀಡ್ ಬರೆದುಕೊಟ್ಟ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ನನ್ನ ಮೂರು ಜನ ಸಹೋದರಿಯರು ಮತ್ತು ನನ್ನ ಸಹೋದರನ ಮೇಲೆ ಎ.ಸಿ.ಎಂ.ಎಂ 24 ನೇ ನ್ಯಾಯಾಲಯದಲ್ಲಿ ಪಿ.ಸಿ.ಆರ್ ಫೈಲು ಮಾಡಿರುತ್ತೇನೆ ಎಂದರೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ನಾನು ಆ ಕೇಸಿನಲ್ಲಿ ಸಾಕ್ಷಿ ಕೂಡ ಹೇಳಿರುತ್ತೇನೆ ಎಂದರೆ ಹೇಳಿರಬಹುದು ನನಗೆ ನೆನಪಿಲ್ಲ. ಆ ಕೇಸಿನಲ್ಲಿ ನಾನು ರಿಲಿಂಕ್ವಿಶ್ ಮೆಂಟ್ ಡೀಡ್ ನ್ನು ಬೇನಾಮಿ ಟ್ರಾನ್ಸಕ್ಷನ್ ಎಂದು ಹೇಳಿರುತ್ತೇನೆ ಎಂದರೆ ನನಗೆ ನೆನಪಿಲ್ಲ.

ಮದ್ರಾಸ್ ನಲ್ಲಿ ಇರುವ ನನ್ನ ಸಹೋದರನ ಜಮೀನು ನನ್ನ ಜಮೀನಿನ ಪಕ್ಕದಲ್ಲಿ ಇರುವುದನ್ನು ಅವನು ಮಾರಾಟ ಮಾಡಿರುತ್ತಾನೆ. ನಾನು ನನ್ನ ಸಹೋದರನ ಮದ್ರಾಸ್ ನಲ್ಲಿಯ ಜಮೀನು ಖರೀದಿ ತೆಗೆದುಕೊಂಡವನ ಮೇಲೆ ನಾನು ಕ್ರಿಮಿನಲ್ ಕೇಸು ಮಾಡಿರುತ್ತೇನೆ ಎಂದರೆ ನಿಜ.

ಈಗ ನನಗೆ ತೋರಿಸಲಾದ ಪತ್ರ ನನ್ನ ಲೆಟರ್ ಹೆಡ್ ನಲ್ಲಿ ಮತ್ತು ನನ್ನ ಕೈಬರಹದಲ್ಲಿ ಬರೆದದ್ದು ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅದನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ.

ಈ ಹಂತದಲ್ಲಿ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ದಾಖಲಿಸಿಕೊಳ್ಳಲಾಗಿದೆ.)

ಓ ಹೇ ಕೇ ಸರಿ ಇದೆ.

( ಎಸ್. ಆರ್. ದಿಂಡಲಕೊಪ್ಪ )
15 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.